## ಟ್ಯಾಕ್ಸಿ ಶೇರಿಂಗ್ ಆ್ಯಪ್

ಈ ಭರಾಟೆಯ ದಿನಗಳಲ್ಲಿ ಸಮಯ ಹಾಗೂ ಹಣವನ್ನು ಉಳಿತಾಯ ಮಾಡಬೇಕೆಂಬ ಆಸೆ ಪ್ರತಿಯೊಬ್ಬರಲ್ಲೂ ಇದೆ. ಅಂಥವರಿಗೆ ಹೊಸ ಟ್ಯಾಕ್ಸಿ ಶೇರಿಂಗ್ ಆ್ಯಪ್ ನೆರವಿಗೆ ಬಂದಿದೆ. ಈ ಆ್ಯಪ್ ಡೌನ್‌ಲೋಡ್ ಮಾಡಿ ನೋಡಿ. ನಿಮಗೆ ಟ್ಯಾಕ್ಸಿ ಬೇಕೆಂದಾಗ ಸರ್ಚ್ ಮಾಡಿದರೆ ನೀವಿರುವ ದಿಕ್ಕಿಗೆ ಯಾವುದಾದರೂ ಟ್ಯಾಕ್ಸಿ ಬರುತ್ತಿದೆಯೇ ಎಂಬುದನ್ನು ನೋಡಬಹುದು. ಸರಿಯಾಗಿ ಕಾಣದಿದ್ದರೆ ನೀವಿರುವ ಜಾಗ ಹಾಗೂ ನೀವು ತೆರಳುವ ಸ್ಥಳದ ವಿವರ ನಮೂದಿಸಿ. ನೀವು ಹೋಗುವ ಮಾರ್ಗದಲ್ಲೇ ತೆರಳುವ ಇತರ ಪ್ರಯಾಣಿಕರನ್ನು ಟ್ಯಾಕ್ಸಿ ಚಾಲಕ ಕರೆದುಕೊಂಡು ಹೋಗುವುದರಿಂದ ನಿಮ್ಮ ಪ್ರಯಾಣಕ್ಕೆ ತಗುಲುವ ವೆಚ್ಚ ಕಡಿಮೆಯಾಗುತ್ತದೆ. ಕೆಲವೇ ಕೆಲವು ಟ್ಯಾಕ್ಸಿ ಕಂಪೆನಿಗಳು ಏಕಸ್ವಾಮ್ಯತೆ ಸಾಧಿಸುವುದನ್ನು ಇದು ತಪ್ಪಿಸುತ್ತದೆ.






## ಕ್ವಾಂಟಮ್ ರಿವೆಂಜ್

ಇಡೀ ವಿಶ್ವ, ಸೌರಮಂಡಲ ವ್ಯವಸ್ಥೆ, ಸೂರ್ಯನ ಸುತ್ತ ಸುತ್ತುವ ಗ್ರಹಗಳು.. ಇವುಗಳ ಬಗ್ಗೆ ಶಾಲೆಯಲ್ಲೇ ಓದಿರುತ್ತೇವೆ. ಆದರೆ ಈಗ ಕಾಲ ಬದಲಾಗಿದೆ. ಮಾನವ ಬೇರೆ ಗ್ರಹದಲ್ಲಿ ವಾಸ್ತವ್ಯ ಹೂಡಲು ಯತ್ನಿಸುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಅನ್ಯಗ್ರಹ ಜೀವಿಯೂ ನಮ್ಮ ಭೂಮಂಡಲದ ವ್ಯವಸ್ಥೆಯನ್ನು ಅಲ್ಲೋಲಕಲ್ಲೋಲ ಮಾಡಲು ಯತ್ನಿಸಿದರೆ..! ಇಲ್ಲಿಯ ಜೀವಿಗಳನ್ನು ನಾಶ ಮಾಡಲು ಹೊರಟರೆ..! ಕೇವಲ ಮೇಶಾ ಹಾಗೂ ಅದರ ಚಾಲಕ ಮಾತ್ರ ಈ ಗ್ರಹವನ್ನು ಹಾಗೂ ಇಲ್ಲಿರುವ ಜೀವಿಗಳನ್ನು ಅನ್ಯಗ್ರಹ ಜೀವಿಗಳಿಂದ ರಕ್ಷಿಸಬಲ್ಲರು. ಇದು ಕ್ವಾಂಟಮ್ ರಿವೆಂಜ್‌ನ ಕಥೆಯಾಗಿದ್ದು, ಈ ಆ್ಯಪ್ ಸದ್ಯ ಬಿಡುಗಡೆಯಾಗಿದೆ. ಈ ಗೇಮ್ ಆ್ಯಪ್ ಅನ್ನು ಐಓಎಸ್, ಐಫೋನ್, ಐಪ್ಯಾಡ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಆಸನ

ಒಂದು ಕಚೇರಿಯಲ್ಲಿ ತಂಡವಾಗಿ ಕೆಲಸ ಮಾಡುವವರಿಗೆ ಉಪಯುಕ್ತವಾದ ಆ್ಯಂಡ್ರಾಯ್ಡ್ ಆ್ಯಪ್. ನೋಟಿಫಿಕೇಶನ್‌ಗಳನ್ನೂ ಕಳಿಸಬಹುದು. ಹೆಚ್ಚಾಗಿ ಪ್ರವಾಸ ಮಾಡುವವರಿಗೆ, ದೂರದ ಸ್ಥಳದಲ್ಲಿ ಕೆಲಸ ಮಾಡುವವರಿಗೆ ಕೆಲಸದ ಸ್ಥಿತಿಗತಿಗಳನ್ನು ಅಪ್‌ಡೇಟ್ ಮಾಡಬಹುದು. ಉಚಿತ ಖಾತೆ ಹೊಂದಬಹುದು. ಮೇಲ್ದರ್ಜೆಗೆ ಏರಿಸಬೇಕಾದರೆ ಶುಲ್ಕ ನೀಡಬೇಕು. ಉಚಿತ ಆ್ಯಪ್‌ನಲ್ಲಿ 30 ಉದ್ಯೋಗಿಗಳವರೆಗೆ ಈ ಆ್ಯಪ್‌ಗೆ ಸಂಪರ್ಕ ಸಾಧಿಸಬಹುದು. ಪರಸ್ಪರ ಟೆಕ್ಸ್ಟ್ ಆಧಾರಿತ ಸಂಭಾಷಣೆ ನಡೆಸಬಹುದು. ಆಫ್‌ಲೈನ್ ಆದರೂ ಕೆಲವು ಮಾಹಿತಿಗಳನ್ನು ವೀಕ್ಷಿಸಬಹುದು. ಹೊಸ ಟಾಸ್ಕ್‌ಗಳನ್ನು ಸೃಷ್ಟಿಸಿ ನೀವು ಪೂರ್ಣಗೊಳಿಸಿದ ಟಾಸ್ಕ್ ಅನ್ನು ಮತ್ತೊಮ್ಮೆ ಪರಿಶೀಲಿಸಬಹುದು.




## ನ್ಯೂಸ್‌ಟ್ಯಾಬ್

ಇದು ವಿಶುವಲ್ ರೀಡರ್ ಆಗಿದ್ದು, ಸುದ್ದಿಗಳನ್ನು ಓದಬಹುದು. ನೀವೇ ಕೆಲವು ಸುದ್ದಿಗಳನ್ನು ಸೇರಿಸಬಹುದು. ಆ್ಯಂಡ್ರಾಯ್ಡ್‌ನ ಈ ಆ್ಯಪ್ ಎಲ್ಲಾ ಸುದ್ದಿಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿಮಗೆ ತಲುಪಿಸುತ್ತದೆ. ನೀವು ಸೈನಪ್ ಆದ ಮೇಲೆ ನಿಮಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದರ ಮೇಲೆ ಅದು ಸುದ್ದಿಗಳನ್ನು ಪೂರೈಸುತ್ತದೆ. ಅಂದರೆ ತಂತ್ರಜ್ಞಾನ, ರಾಜಕೀಯ, ಕ್ರೀಡೆ, ವಿಜ್ಞಾನ ಮೊದಲಾದವು. ಈ ಎಲ್ಲವೂ ಟೈಲ್ ಮೆನುವಿನಲ್ಲಿ ಸೇರಿಸಲ್ಪಡುತ್ತವೆ. ಯಾವುದೇ ವಿಭಾಗಕ್ಕೆ ಹೋಗಿ ಸುದ್ದಿ ಓದಬಹುದು ಅಥವಾ ನೇರವಾಗಿ ಹೋಂ ಪುಟದಲ್ಲಿ ಮುಖ್ಯ ಸುದ್ದಿಯನ್ನು ಓದಬಹುದು.




■ ಎಸ್. ತುಂಬೆ